ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ಡಾ. ಸುಗುಣಾಬಾಯಿ

ಡಾ. ಶೈಲಜಾ ಆಮೂರ



''ಮಗು, ಈ ಮಾನವ ಜನ್ಮ ಲಭಿಸುವುದು ತುಂಬ ದುರ್ಲಭವಾದ ಭಾಗ್ಯ. ಇದನ್ನು ಸರಿಯಾದ ರೀತಿಯಲ್ಲಿ ಬದುಕದೇ ಹೋದರೆ ಈ ಸೌಭಾಗ್ಯವನ್ನು ವ್ಯರ್ಥವಾಗಿ ಕಳೆದಂತಾಗುತ್ತದೆ. ನಮ್ಮ ಬದುಕನ್ನು ಇತರರ ಒಳತಿಗಾಗಿ ಮುಡಿಪಾಗಿರಿಸದಿದ್ದರೆ ನಮ್ಮ ಜೀವನ ಒಂದು ಪ್ರಾಣಿಯ ಬದುಕಿನಂತಾಗುತ್ತದೆ. ನಿನ್ನ ಜೀವನವನ್ನು ತಾಯಿಯ ಸೇವೆಗೆ ಮೀಸಲಾಗಿರಿಸಿ ಪರಿಪೂರ್ಣತೆಯನ್ನು ಕಂಡುಕೊ. ಬದುಕನ್ನು ಬಂಧುರಗೊಳಿಸಿಕೊಳ್ಳಲು ಸಂಕಲ್ಪ ಮತ್ತು ಸಾಧನೆಗಳು ಅತ್ಯಂತ ಉಪಯುಕ್ತವಾದ ಸಾಮಗ್ರಿಗಳು.'' ಈ ಅತ್ಯಮೂಲ್ಯವಾದ ನುಡಿಗಳನ್ನು ಸ್ವಾಮಿ ವಿವೇಕಾನಂದರು ಹನ್ನೊಂದು ವರ್ಷ ವಯಸ್ಸಿನ ಬಾಲಕಿ ಸುಗುಣಾಗೆ ಆಶೀರ್ವದಿಸುತ್ತ ನುಡಿದಿದ್ದರು. ಈ ನುಡಿಮುತ್ತುಗಳನ್ನು ಸುಗುಣಾಬಾಯಿ ತನ್ನ ಬದುಕಿನುದ್ದಕ್ಕೂ ತನ್ನ ಎದೆಯಾಳದಲ್ಲಿ ಭದ್ರವಾಗಿರಿಸಿಕೊಂಡು ಅರ್ಥಪೂರ್ಣ ಬದುಕನ್ನು ಬಾಳಿದಳಲ್ಲದೆ ಎಷ್ಟೋ ಅಸಹಾಯಕರಿಗೆ, ಎಷ್ಟೋ ಆಧ್ಯಾತ್ಮಿಕ ಅಭಿಲಾಷೆಯ ಜಿಜ್ಞಾಸುಗಳಿಗೆ ಆಶ್ರಯದಾತೆಯಾದಳು!

ಈ ಸುಗುಣಾಬಾಯಿ ಯಾರು? ಅವಳು ಯಾವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರನ್ನು ಕಾಣುವ ಸುಯೋಗವನ್ನು ಪಡೆದಳು? ಎಂಬುದು ಒಂದು ಕುತೂಹಲಕಾರಿಯಾದ ಸಂಗತಿಯಾಗಿದೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತ ಪರ್ಯಟನೆ ಮಾಡುತ್ತಿದ್ದ ವೇಳೆಯಲ್ಲಿ ಹಲವು ದಿನ ರಾಜಸ್ಥಾನದ ಆಳ್ವಾರ್‌ನಲ್ಲಿ ತಂಗಿದ್ದರು. ಅವರ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಎಷ್ಟೋ ಜನ ಆಳ್ವಾರಿನ ನಿವಾಸಿಗಳು ಅವರ ಅನುಯಾಯಿಗಳಾದರು. ಅಂತಹ ಒಬ್ಬ ಶಿಷ್ಯರಲ್ಲಿ ರಾಜಶೇಖರ ಶರ್ಮಾ ಕೂಡ ಒಬ್ಬರಾಗಿದ್ದರು. ಅವರ ಆಳ್ವಾರರ ರಾಮಗಂಜ ಭಾಗದಲ್ಲಿ ವಾಸಿಸುತ್ತಿದ್ದರು. ಹಲವು ಬಾರಿ ಸ್ವಾಮೀಜಿ ಅವರ ಮನೆಗೆ ಭೇಟಿ ನೀಡಿದ್ದರು.

ಸುಗುಣಾಬಾಯಿ ರಾಜಶೇಖರ ಶರ್ಮಾರ ಒಬ್ಬಳೇ ಮಗಳು. ಅವಳ ತಂದೆ ಮನೆಯಲ್ಲಿಯೇ ಅವಳ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದ್ದರು. ಅಂದಿನ ದಿನಗಳಲ್ಲಿ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಬಂದು ಶಾಲೆಗೆ ಹೋಗುವುದು ಒಂದು ಸಾಂಪ್ರದಾಯಿಕ ಅಪಚಾರವೆಂದು ಪರಿಗಣಿಸಲಾಗುತ್ತಿತ್ತು. ಉನ್ನತ ಹುದ್ದೆಯಲ್ಲಿದ್ದ ರಾಜಶೇಖರ, ತನ್ನ ಮಗಳು ವಿದ್ಯಾರ್ಜನೆಯಿಂದ ವಂಚಿತಳಾಗಬಾರದು ಎಂದು ಮನೆಯಲ್ಲಿಯೇ ಅವಳ ವಿದ್ಯಾಭ್ಯಾಸಕ್ಕೆಂದು ನುರಿತ ಶಿಕ್ಷಕವೃಂದವನ್ನು ನಿಯಮಿಸಿದ್ದರು. ಒಂದು ದಿನ ಸ್ವಾಮಿ ವಿವೇಕಾನಂದರು ಇವರ ಮನೆಗೆ ಬಂದಾಗ ಹನ್ನೊಂದು ವರ್ಷ ವಯಸ್ಸಿನ ಪುಟ್ಟ ಬಾಲೆ ಸುಗುಣಾಬಾಯಿ ಸ್ವಾಮೀಜಿಯವರ ಚರಣಗಳಿಗೆ ತನ್ನ ಹಣೆಯನ್ನು ತಾಗಿಸಿ ನಮಸ್ಕರಿಸಿದಳು. ಸ್ವಾಮೀಜಿ ತಮ್ಮ ಹಸ್ತಗಳನ್ನು ಅವಳ ತಲೆಯ ಮೇಲಿಟ್ಟು ''ಶಿವ, ಶಿವ, ಶಿವ'' ಎಂದು ಆಶೀರ್ವದಿಸಿದರು! ಆಗ ರಾಜಶೇಖರ ಸ್ವಾಮೀಜಿಗೆ ಸುಗುಣಾಳಿಗೆ ಒಂದೆರಡು ಉಪದೇಶದ ಮಾತುಗಳನ್ನು ಹೇಳುವಂತೆ ವಿನಂತಿಸಿದರು. ಸ್ವಾಮೀಜಿ ವಿವೇಕಾನಂದರು ಸುಗುಣಾಳನ್ನು ಆಶೀರ್ವದಿಸುತ್ತ ಮಾನವ ಜನ್ಮದ ಮಹತ್ವವೇನು, ಅದನ್ನು ಹೇಗೆ ಸಾರ್ಥಕವಾಗಿಸಿಕೊಳ್ಳಬೇಕು ಎಂಬುದನ್ನು ಒಂದೆರಡು ವಾಕ್ಯಗಳಲ್ಲಿ ತಿಳಿಸಿದರು. ''ಸಂಕಲ್ಪ ಮತ್ತು ಸಾಧನೆ, ಈ ಎರಡೂ ನಿನ್ನ ಜೀವನವನ್ನು ರೂಪಿಸುವ ಪ್ರಮುಖ ಸಲಕರಣೆಗಳಾಗಲಿ'' ಎಂದು ಸ್ವಾಮೀಜಿ ಹೇಳಿದ ವಾಕ್ಯ ಆ ಪುಟ್ಟ ಹೃದಯದಲ್ಲಿ ಅದೆಷ್ಟು ಬಲವಾಗಿ ಬೇರೂರಿತ್ತೆಂದರೆ ಅವಳು ತನ್ನ ಕೊನೆಉಸಿರಿರುವವರೆಗೂ ಇದೊಂದು ವಾಕ್ಯವನ್ನು ವೇದವಾಕ್ಯವೆಂದು ಪರಿಗಣಿಸಿ ತನ್ನ ಬದುಕನ್ನು **ಸಂಕಲ್ಪ, ಸಾಧನೆ** ಎಂಬ ಭದ್ರ ಬುನಾದಿಯ ಮೇಲೆಯೇ ಭವ್ಯವಾಗಿ ನಿರ್ಮಿಸಿಕೊಂಡಿದ್ದಳು!

ಸುಗುಣಾಬಾಯಿಯ ಜೀವನವನ್ನು ಆ ದಿನಗಳಲ್ಲಿ ಅವಳನ್ನು ತೀರ ಸನಿಹದಿಂದ ನೋಡಿದ್ದ ಹರಿಶಂಕರ ಗೋಯೆಲ್

ಎಂಬ ಮೇಧಾವಿ ಬರಹಗಾರರ ಕೃತಿಗಳಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದಾಗಿದೆ. ವೃತ್ತಿಯಿಂದ ವಕೀಲರಾಗಿದ್ದ ಹರಿಶಂಕರರಿಗೆ ಸಾಹಿತ್ಯ ಓದುವುದು, ಬರೆಯುವುದು ಒಂದು ಪ್ರವೃತ್ತಿಯಾಗಿತ್ತು. ಅವರು ಸುಗುಣಾಬಾಯಿಯ ಕುರಿತಾಗಿ ಬರೆದಿದ್ದ ಒಂದು ಲೇಖನದಲ್ಲಿ ಬರೆಯುತ್ತಾರೆ: ''೧೮೮೦ನೆಯ ಇಸವಿ ಸಮಯದಲ್ಲಿ, ರಾಜಾ ಮಂಗಳಸಿಂಗನ ಆಳ್ವಿಕೆಯಲ್ಲಿ ಅಲೆಕ್ಸಾಂಡರ್ ಆಸ್ಪತ್ರೆಯ ನಿರ್ಮಾಣ ಮಾಡಲಾಗಿತ್ತು. ಮುಂದೆ ಕಾಲಕ್ರಮದಲ್ಲಿ ಈ ಆಸ್ಪತ್ರೆಯ ಹೆಸರನ್ನು ಲೇಡಿ ಡಫರಿನ್ ಆಸ್ಪತ್ರೆ ಎಂದು ಬದಲಿಸಲಾಗಿತ್ತು. (ಇವತ್ತು ಇದೇ 'ರಾಜೀವ ಗಾಂಧಿ ಆಸ್ಪತ್ರೆ' ಎಂದು ಆಳ್ವಾರ್‌ನಲ್ಲಿ ಸುಪ್ರಸಿದ್ಧವಾಗಿದೆ.) ಅಂದಿನ ದಿನಗಳಲ್ಲಿ ಹೆರಿಗೆ ಆಸ್ಪತ್ರೆಯ ಹಾಗೂ ಆರೋಗ್ಯಕರ ಮಗುವಿನ ಜನನವಾಗುವ ಸಕಲ ಸೌಲಭ್ಯಗಳಿರುವ ಆಸ್ಪತ್ರೆಗಳು ತೀರ ವಿರಳವಾಗಿದ್ದವು. ರಾಜ ಮನೆತನದವರೂ ಕೂಡ ತಮ್ಮ ಹೆಣ್ಣುಮಕ್ಕಳ ಹೆರಿಗೆಯ ಸಮಯದಲ್ಲಿ ನುರಿತ ದಾದಿಯನ್ನು ಜೈಪುರದಿಂದ ಕರೆಸಿಕೊಳ್ಳುತ್ತಿದ್ದರು. ರಾಜಾ ಜಯಸಿಂಗನು ಈ ತೊಂದರೆಯನ್ನು ನೀಗಿಸುವುದಕ್ಕಾಗಿ ಅಲೆಕ್ಸಾಂಡರ್ ಆಸ್ಪತ್ರೆಯಲ್ಲಿ ದಾದಿಯರ ತರಬೇತಿ ಕೇಂದ್ರವನ್ನು ನಿರ್ಮಿಸಿದ. ಎಷ್ಟೋ ಜನ ತಮ್ಮ ಯುವ ವಯಸ್ಸಿನ ಹೆಣ್ಣುಮಕ್ಕಳನ್ನು ಈ ತರಬೇತಿಗಾಗಿ ಸೇರಿಸಲಾರಂಭಿಸಿದರು. ಇದರಿಂದ ಸ್ಫೂರ್ತಿಗೊಂಡ ಸುಗುಣಾಬಾಯಿ, ತಾನೂ ಕೂಡ ದಾದಿಯರ ತರಬೇತಿ ಕೇಂದ್ರದಲ್ಲಿ ವಿದ್ಯಾರ್ಜನೆಗಾಗಿ ಸೇರ್ಪಡೆಯಾದಳು. ಜನಸೇವೆಯನ್ನೇ ತನ್ನ ಜೀವನದ ಮಹೋದ್ದೇಶವಾಗಿಸಿಕೊಂಡು, ೧೯೦೦ನೆಯ ಇಸವಿಯಲ್ಲಿ ತರಬೇತಿಯಲ್ಲಿ ಚೆನ್ನಾಗಿ ನುರಿತು, ಆಳ್ವಾರಿನ ಲೇಡಿ ಡಫರಿನ್ ಆಸ್ಪತ್ರೆಯಲ್ಲಿ ದಾದಿಯಾಗಿ ಕೆಲಸ ಪ್ರಾರಂಭಿಸಿದರು. ಆ ದಿನಗಳಲ್ಲಿ ಸಾಮಾನ್ಯವಾಗಿ ಈ ಆಸ್ಪತ್ರೆಗೆ 'ಝನಾನ ಆಸ್ಪತ್ರೆ' (ಹೆಣ್ಣುಮಕ್ಕಳ ಆಸ್ಪತ್ರೆ)ಎಂದೇ ಜನ ಹೆಸರಿಸಿದ್ದರು. ಮೊದಮೊದಲು ಈ ಆಸ್ಪತ್ರೆ ಕೇವಲ ರಾಜಮನೆತನದವರ ಆರೈಕೆಗೆ ಮೀಸಲಾಗಿತ್ತು. ಸುಗುಣಾಬಾಯಿ ಅತ್ಯಂತ ಬುದ್ಧಿವಂತಿಕೆಯಿಂದ ಈ ವಿಷಯದ ಬಗ್ಗೆ ರಾಜ ಪರಿವಾರದವರೊಡನೆ ಚರ್ಚೆ ನಡೆಸಿ ಝನಾನ ಆಸ್ಪತ್ರೆಯ ಸವಲತ್ತುಗಳು ಎಲ್ಲಾ ಜನರಿಗೂ ದೊರೆಯುವಂತಾಯಿತು. ಆಸ್ಪತ್ರೆಯ ಕಾರ್ಯಕಾರಿ ಸಮಿತಿಯವರು ಸುಗುಣಾಬಾಯಿಯ ನಿಃಸ್ವಾರ್ಥ ಸೇವೆ ಹಾಗೂ ಸಾಮರ್ಥ್ಯಗಳನ್ನು ಕಂಡು ಸಂತೋಷಪಡುತ್ತ ಅವಳಿಗೆ ವೈದ್ಯಕೀಯ ವೃತ್ತಿಯನ್ನು ಅಭ್ಯಾಸ ಮಾಡುವುದಕ್ಕೆ ಹುರಿದುಂಬಿಸಿದರು. ಅವಳನ್ನು ವೈದ್ಯಕೀಯ ವ್ಯಾಸಂಗಕ್ಕೆ ಕಳಿಸುವ ಸಂಪೂರ್ಣ ಜವಾಬ್ದಾರಿಯನ್ನೂ ತಾವೇ ವಹಿಸಿಕೊಂಡರು. ಸುಗುಣಾಬಾಯಿ ಯಶಸ್ವಿಯಾಗಿ ವೈದ್ಯಕೀಯ ಅಭ್ಯಾಸವನ್ನೂ ಪೂರೈಸಿ ಆಳ್ವಾರಿನ ಮೊದಲ ಮಹಿಳಾ ವೈದ್ಯೆ ಎಂದು ಹೆಸರುವಾಸಿಯಾದಳು. ಹಲವು ದಿನಗಳಾದ ಮೇಲೆ ಅದೇ ಆಸ್ಪತ್ರೆಯಲ್ಲಿ ಸಹಾಯಕ ವ್ಯವಸ್ಥಾಪಕಿಯಾಗಿ (Assistant Superinten dent)ಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಳಾದಳು.''

ಸುಗುಣಾಬಾಯಿಯ ವೈಯಕ್ತಿಕ ಜೀವನವನ್ನು ನಾವು ನೋಡಿದಾಗ ಅವಳಿಂದ ಅವಳ ತಾಯಿಗೆ, ಅವಳ ಚಿಕ್ಕಮ್ಮನಿಗೆ ಹಾಗೂ ಹತ್ತಿರದ ಕೆಲವು ಬಂಧುಗಳಿಗೆ ಸ್ವಲ್ಪ ನಿರಾಶೆ ಹಾಗೂ ಅಸಮಾಧಾನಗಳಾಗಿದ್ದವು. ಮನೆಯಲ್ಲಿ ಹಿರಿಯರೆಲ್ಲರಿಗೂ ಎಲ್ಲ ಸಾಮಾನ್ಯ ಹೆಣ್ಣುಮಕ್ಕಳಂತೆ ಸುಗುಣಾಬಾಯಿ ಕೂಡ ಮದುವೆ ಮಾಡಿಕೊಂಡು ಸಂಸಾರಿಯಾಗಬೇಕೆಂಬ ಬಯಕೆಯಿತ್ತು. ಆದರೆ ಅವಳಿಗೆ ಸ್ವತಃ ಸಂಸಾರ ಜೀವನದ ಬಗ್ಗೆ ಸ್ವಲ್ಪವೂ ಕೂಡ ಆಸಕ್ತಿಯಿರಲಿಲ್ಲ. ಅಂದಿನ ಅವಳ ಮನಃಸ್ಥಿತಿಯನ್ನು ಅವಳು ತನ್ನ ಚಿಕ್ಕಮ್ಮ ಜಯಲಕ್ಷ್ಮಿ ಮಾಥೂರಳಿಗೆ ಬರೆದಿದ್ದ ಪತ್ರದಿಂದ ನಾವು ಸ್ಪಷ್ಟವಾಗಿ ಕಾಣಬಹುದು:

''ಆದರಣೀಯ ಚಿಕ್ಕಮ್ಮನಿಗೆ,

ದಯವಿಟ್ಟು ನೀವುಗಳು ಯಾರೂ ನನ್ನ ಬಗ್ಗೆ ಚಿಂತೆ ಮಾಡಬೇಡಿ, ನಾನು ಸ್ವಾಮೀಜಿಯವರ ಕೃಪಾಶೀರ್ವಾದದಿಂದ ಸೌಖ್ಯವಾಗಿದ್ದೇನೆ. ಸ್ವಾಮೀಜಿಯವರು ಆಳ್ವಾರಿಗೆ ಬಂದಿದ್ದಾಗ ಅವರನ್ನು ಕಾಣುವ ಹಾಗೂ ಅವರ ಪಾದ ಸ್ಪರ್ಶಿಸುವ ಸೌಭಾಗ್ಯ ನನಗೆ ಒದಗಿತ್ತು ! ಅವರ ಶುಭಾಗಮನದಿಂದ ನಮ್ಮ ಮನೆಯಲ್ಲಿ ಮಂಗಳಮಯ ವಾತಾವರಣ ನಿರ್ಮಾಣವಾಗಿತ್ತು. ನಿಮಗೆ ಗೊತ್ತಿದ್ದಂತೆ, ನನ್ನ ತಂದೆ ಅವರಿಂದ ತುಂಬ ಆಕರ್ಷಿತರಾಗಿದ್ದರು. ಅವರು ಹಲವು ಬಾರಿ ಸ್ವಾಮೀಜಿಯವರನ್ನು ನಮ್ಮ ಮನೆಗೆ ಆಹ್ವಾನಿಸಿದಾಗ ಕೊನೆಗೊಮ್ಮೆ ಸ್ವಾಮೀಜಿ ನಮ್ಮ ಮನೆಗೆ ಬರಲು ಒಪ್ಪಿಗೆ ಸೂಚಿಸಿದರು. ಅವರು ನಮ್ಮ ಮನೆಗೆ ಆಗಮಿಸಿದಾಗ ಅವರ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸುವ ಸುಯೋಗ ನನಗೂ ಒದಗಿ ಬಂದಿತ್ತು ! ನಾನು ನಮಸ್ಕರಿಸುತ್ತಿದ್ದಂತೆ ಸ್ವಾಮೀಜಿ ತಮ್ಮ ಹಸ್ತವನ್ನು ನನ್ನ ಎಲೆಯ ಮೇಲಿರಿಸಿ, 'ಶಿವ, ಶಿವ, ಶಿವ' ಎನ್ನುತ್ತ ನನ್ನನ್ನು ಆಶೀರ್ವದಿಸಿದರು! ಓ, ಅದೊಂದು ಅಪೂರ್ವವಾದ ದೈವೀ ಅನುಭೂತಿ! ಅವರು ಸುಮಾರು ಹೊತ್ತು ನಮ್ಮ ಮನೆಯಲ್ಲಿದ್ದು ಹಾಡುಗಳನ್ನು ಹಾಡಿದರು. ನಮ್ಮ ತಂದೆಯವರೊಡನೆ ಹಲವು ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅವರು ಅದೇನು ಚರ್ಚೆ ಮಾಡುತ್ತಿದ್ದರು ಎನ್ನುವುದು ನನಗೊಂದೂ ಅರ್ಥವಾಗಿರಲಿಲ್ಲ. ಆದರೆ ಅವರ ಆ ಧ್ವನಿ ನನ್ನ ಹೃದಯವನ್ನು ತಟ್ಟುತ್ತಿತ್ತು ! ಅವರ ಆ ದೈವೀ ಮುಖಚರ್ಯೆಯಿಂದ ತುಂಬ ಪ್ರಭಾವಿತಳಾಗಿದ್ದೆ. ಅವರ ಭೇಟಿ ಕೇವಲ ಸ್ವಲ್ಪ ಸಮಯವಿತ್ತಾದರೂ ನಮ್ಮಗಳಿಗೆಲ್ಲ ಸ್ವರ್ಗೀಯ ಆನಂದದ ಅನುಭವವಾಗಿತ್ತು. ''ಹೆಣ್ಣುಮಕ್ಕಳ ಉಳಿವಿಗೆ ಶಿಕ್ಷಣ ಅತ್ಯಂತ ಆವಶ್ಯಕವಾಗಿದೆ.'' ಎಂದು ಅವರು ಹೇಳಿದ ವಾಕ್ಯ ಇಂದಿಗೂ ನನ್ನ ಎದೆಯಲ್ಲಿ ಚಿರಸ್ಥಾಯಿ ಆಗಿದೆ.

''ತರುವಾಯ ಸ್ವಾಮೀಜಿ ಅಮೆರಿಕೆಗೆ ಹೋದರು ಹಾಗೂ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಜಯಶಾಲಿಯಾದರು! ನಾನು ಪತ್ರಿಕೆಯಲ್ಲಿ ಅವರ ಬಗ್ಗೆ ಬಂದಿರುವ ಎಲ್ಲ ಲೇಖನಗಳನ್ನೂ ಜೋಡಿಸಿ ಇಟ್ಟುಕೊಂಡಿದ್ದೇನೆ. ಅವರು ಎರಡನೆಯ ಬಾರಿ ಆಳ್ವಾರಿಗೆ ಆಗಮಿಸಿದಾಗಲೂ ನಾನು ಅವರನ್ನು ಭೇಟಿ ಮಾಡಿ ಅವರ ಆಶೀರ್ವಾದ ಪಡೆದಿದ್ದೆ. ಅವರು ಬರೆಯುತ್ತಿದ್ದ ಪತ್ರಗಳಿಗಾಗಿ ಕಾತರಳಾಗಿ ಕಾಯುತ್ತಿದ್ದೆ. ನನಗೇ ಗೊತ್ತಿಲ್ಲ,